

# ದೈತ್ಯ ಹುಣಸೆಮರ!



'ಮಂಕೀಸ್ ಬ್ರೆಡ್' 'ಬೊಬಾಬ್' ಆನೆ ಹುಣಸೆ ಹಾಗೂ ಸ್ಥಳೀಯವಾಗಿ 'ದೊಡ್ ಹುಣಸಿ ಮರ' ಎಂದು ಕರೆಯಲ್ಪಡುವ ಈ ಮರಗಳು ಧಾರವಾಡ ಜಿಲ್ಲೆ ಸವಣೂರಿನ ಬಳಿ ಇದೆ. ಇಂತಹ ಮರ ಕರ್ನಾಟಕದಲ್ಲಿ ಮಾತ್ರವಲ್ಲ ಇಡೀ ಭಾರತದಲ್ಲಿ ಬೇರೆಲ್ಲಿಯೂ ಇಲ್ಲ.

ಈ ವೃಕ್ಷವು ಜಾಂಬುಕೇಶಿಯ ಕುಟುಂಬ ವರ್ಗಕ್ಕೆ ಸೇರಿದ್ದು ಮೂಲತಃ ಆಫ್ರಿಕಾ ಖಂಡದ್ದಾಗಿದೆ. ಜಗತ್ತಿನಲ್ಲಿಯೇ ಬೃಹತ್ ಆಕಾರದಲ್ಲಿ ಬೆಳೆಯುವಂತಹ, ಭೂಮಿಯಲ್ಲಿ 1000 ವರ್ಷಕ್ಕೂ ಮೇಲ್ಪಟ್ಟು ಬದುಕುವಂತಹ ಮರಗಳಲ್ಲಿ ಇದೂ ಒಂದು. ಗಿಡದ ಬುಡವು ಬೃಹದಾಕಾರವಾಗಿದೆ. ಉಬ್ಬಿದ ಬಾಟಲಿಯಂತಿದ್ದು ಬಹಳ ದೊಡ್ಡ ಗಾತ್ರದಲ್ಲಿ ಬೆಳೆದು ಮೇಲ್ಭಾಗ ಕೂಡಲೇ ಮೊನಚಾಗಿ ಅಲ್ಲಿಂದ ಕವಲುಗಳಾಗುವವು.

ಈ ವೃಕ್ಷದ ಬೀಜವನ್ನು ಭಗವಾನ್ ಶ್ರೀ ಕೃಷ್ಣ 5000 ವರ್ಷಗಳ ಹಿಂದೆ ಆಫ್ರಿಕಾದಿಂದ ತಂದ ಎಂಬ ಪೌರಾಣಿಕ ಉಲ್ಲೇಖವಿದೆ. ಸವಣೂರಿನ ಕಲ್ಮಠದ ಆವರಣದಲ್ಲಿ ತ್ರಿಕೋನಾಕಾರದಲ್ಲಿ ಇರುವ ಈ ಮೂರು ಮರಗಳು ಅನೇಕ ಶತಮಾನಗಳಿಂದ ಇವೆ. ಸಂತ ಗೋರಕನಾಥರು ಈ ಗಿಡವನ್ನು ನೆಟ್ಟಿದ್ದರಿಂದ ಗೋರಕನಾಥ ವೃಕ್ಷ ಎಂತಲೂ ಕರೆಯಲ್ಪಡುವ ಇದರ ಕಾಲಮಾನದ ಬಗ್ಗೆ ಯಾವುದೇ ನಿಖರ ದಾಖಲೆಗಳಿಲ್ಲ. ಆದರೂ ಅಂದಾಜು 1500 ವರ್ಷಗಳಷ್ಟು ಹಳೆಯದು ಎನ್ನಲಾಗಿದೆ. ಈ ಮರದ ಬುಡದಲ್ಲಿ ಇಟ್ಟ ಯಾವುದೇ ಪದಾರ್ಥ ಕೆಡದೇ ಇರುವ ಶಕ್ತಿಯನ್ನು ಹೊಂದಿದೆ ಎಂಬುದು ಸ್ಥಳೀಯರ ನಂಬಿಕೆ.

ಇದರಹಣ್ಣು ಸಿಹಿ, ಪೌಷ್ಟಿಕಭರಿತ ಹಾಗೂ ಆರೋಗ್ಯದಾಯಕ. ಇದರಲ್ಲಿ ವಿಟಮಿನ್ ಸಿ ಕಿತ್ತಳೆಗಿಂತ ಅಧಿಕವಾಗಿದೆ. ಕ್ಯಾಲ್ಸಿಯಮ್ ಹಸುವಿನ ಹಾಲಿಗಿಂತಲೂ ಅಧಿಕವಾಗಿದೆ. ಹುಣಸೆಯಂತೆ ಉದ್ದಕ್ಕಿರುವ ಇದರ ಬಲಿತ ಹಣ್ಣಿನಲ್ಲಿ ಕಿಡ್ನಿಯ ಆಕಾರದ ಬೀಜವಿದ್ದು ತಿರುಳಿನಿಂದ ಸುಲಭವಾಗಿ ಬೇರ್ಪಡಿಸಿ ಗಂಜಿ ಅಥವಾ ಹಾಲಿನೊಂದಿಗೂ ಸೇವಿಸಬಹುದು. ಇದರ ಹಣ್ಣು, ಬೀಜ, ಎಲೆ, ಕಾಂಡ ಎಲ್ಲವೂ ಔಷಧೀಯ ಗುಣ ಹೊಂದಿದೆ. ಮಾನವನ ಸಕಲರೋಗವನ್ನೂ ಗುಣಪಡಿಸುವ ಶಕ್ತಿಯಿರುವ ಇದಕ್ಕೆ `ದ ಟ್ರೀ ಆಫ್ ಲೈಫ್' ಎಂಬ ಹೆಸರೂ ಇದೆ. ಈ ಮರವು ಕಂದು ಕೆಂಪು ಬಣ್ಣದ ಕಾಂಡ ಹೊಂದಿದ್ದು, ಕಂದು ಬಣ್ಣದ ಮೊಗ್ಗುಗಳನ್ನೂ, ಅಂದವಾದ ಬಿಳಿ ದಳಗಳ ಹೂವನ್ನೂ ಬಿಡುತ್ತದೆ.

ಹಿರಿದಾದ ಇತಿಹಾಸವಿರುವ ಇದರ ಹಣ್ಣನ್ನು ಜಿಂಬಾಬ್ವೆ, ಕೀನ್ಯಾ ಮುಂತಾದೆಡೆ ಬೇರೆ ಬೇರೆ ಹೆಸರಿನಿಂದ ಕರೆಯುತ್ತಾರೆ. ಇದರಿಂದ ಜ್ಯೂಸ್ ತಯಾರಿಸುತ್ತಾರೆ. ಬೀಜವನ್ನು ಬೇಯಿಸಿ ಸಕ್ಕರೆ ಹಾಕಿ ರುಚಿಯಾದ ಸ್ನ್ಯಾಕ್ಸ್ ಮಾಡಬಹುದು.

■ ಸೀತಾ ಎಸ್. ನಾರಾಯಣ

